ಪ್ರಧಾನ ಸಿವಿಲ್ ಮತ್ತು ಜೆಎಮ್‌ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

ಸಿಸಿ ನಂ.**1306/2024**

ಪಿರ್ಯಾದಿ : ಶ್ರೀ ವೀರಭದ್ರಪ್ಪ ತಂದೆ ಗುರುಲಿಂಗಪ್ಪ ಮೊಟೊರ್,
ವಯಸ್ಸು: 49 ವರ್ಷ, ಉ: ವ್ಯಾಪಾರ, ಸಾ: ಗಣೇಶ ನಗರ ಏರಿಯಾ,
ಯಾದಗಿರಿ, ತಾ: ಮತ್ತು ಜಿ: ಯಾದಗಿರಿ.

ಆರೋಪಿ : ಶ್ರೀ ಸಿದ್ದಲಿಂಗರೆಡ್ಡಿ ತಂದೆ ತಿಪ್ಪರೆಡ್ಡಿ ಪೋಲಿಸ್ ಪಾಟೀಲ್,
ವ: 43 ವರ್ಷ, ಉ: ವ್ಯಾಪಾರ, ಸಾ: ಕಟಗಿ ಶಹಾಪುರ,
ತಾ: ಮತ್ತು ಜಿ: ಯಾದಗಿರಿ.

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ **351** ರ ಅಡಿಯಲ್ಲಿ ಅರೋಪಿತನ ಹೇಳಿಕ

ಪ್ರಶ್ನೆ:1ಃ ನೀವು ದೂರುದಾರರ ವಿಚಾರಣೆಯನ್ನು ಕೇಳಿದ್ದೀರಾ?

ಆರೋಪಿಯ ಉತ್ತರ:

ಪ್ರಶ್ನೆ2 : ಪ್ರಾಸಾ-1 ಶ್ರೀ ವೀರಭದ್ರಪ್ಪ ತಂದೆ ಗುರುಲಿಂಗಪ್ಪ ಮೊಟೊರ್ ಇವರು ಪಿರ್ಯಾದಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಪಿರ್ಯಾದಿದಾರರು ಮತ್ತು ಆಪಾದಿತನಾದ ನೀವು ಪರಿಚಯಸ್ಥರಾಗಿರುತ್ತೀರಿ ಹಾಗೂ ಸದರಿ ಪರಿಚಯದ ಆಧಾರದ ಮೇಲೆ ನೀವು ದೂರುದಾರರಿಂದ ದಿನಾಂಕ **11.07.2019** ರಂದು ರೂ.**2,00,000/-** ಗಳನ್ನು ಪಡೆದುಕೊಂಡಿರುತ್ತೀರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರ:

ಪ್ರಶ್ನೆ: 3 ಃ ಪ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ಸದರಿ ಹಣವನ್ನು ಮರುಪಾವತಿ ಮಾಡುವಂತೆ ಒತ್ತಾಯಿಸಿದಾಗ ಆಪಾದಿತನಾದ ನೀವು ಖಾತೆ ಹೊಂದಿರುವ ಎಕ್ಸಿಸ್ ಬ್ಯಾಂಕ್, ಯಾದಗಿರಿ ಶಾಖೆಗೆ ಸೇರಿದ **008018** ಸಂಖ್ಯೆಯ ಚೆಕ್ ನಲ್ಲಿ ರೂ. **2,00,000/-** ಹಾಗೂ ದಿನಾಂಕ **13.02.2024** ಎಂದು ನಮೂದು ಮಾಡಿ ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ನೀಡಿದ್ದಿರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರ:

ಪ್ರಶ್ನೆ 4ಃ ಪ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ಸದರಿ ಚೆಕ್‌ನ್ನು ಪಿರ್ಯಾದುದಾರರು ನಗದೀರಣಕ್ಕಾಗಿ ತಾವು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಯಾದಗಿರಿ ಶಾಖೆಯ ಮೂಲಕ ಹಾಜರು ಪಡಿಸಿದಾಗ, **"20-Payment stopped by drawer"** ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ಚೆಕ್ಕನ್ನು ದಿನಾಂಕ **14.02.2024** ರಂದು ವಾಪಸ್ಸು ನೀಡಿರುತ್ತಾರೆ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ 5ಃ ಪ್ರಾಸಾ 1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ಅಪಾದಿತನಾದ ನಿಮ್ಮ ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ಸದರಿ ನೋಟಿಸ್ ದಿನಾಂಕ 17.05.2024 ರಂದು ನೀವು ಹಳ್ಳಿಯನ್ನು ತೋರಿದಿರುತ್ತೀರಿ ಎಂದು ಹಿಂತಿರುಗಿ ಬಂದಿರುತ್ತದೆ. ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರು ದೂರುದಾರರಿಗೆ ಚೆಕ್‌ನ್ನು ನೀಡಿ ನಂತರ ಚೆಕ್ ಮೊತ್ತವನ್ನು ಪಾವತಿ ಮಾಡದೆ ಇರುವುದರ ಮೂಲಕ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138 ರಡಿ ಅಪರಾಧ ಎಸಗಿದ್ದೀರಿ ಎಂದು ನುಡಿದಿದ್ದಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಆರೋಪಿಯ ಉತ್ತರಃ

ಪ್ರಶ್ನೆ **6**ಃ ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

ಆರೋಪಿಯ ಉತ್ತರಃ

ಪ್ರಶ್ನೆ **7** ಃ ನಿಮ್ಮ ಪರ ಯವುದಾದರೂ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಆರೋಪಿಯ ಉತ್ತರಃ

(ಮೇಲ್ಕಂಡಂತೆ ಆಪಾದಿತರಿಗೆ ತಿಳಿದ ಭಾಷಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಪ್ರಶ್ನಿಸಿ, ಅವರು ನೀಡಿದ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ದಿನಾಂಕಃ 02.04.2026
ಸ್ಥಳಃ ಯಾದಗಿರಿ

ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ ಸಿ
ನ್ಯಾಯಾಧೀಶರು,ಯಾದಗಿರಿ.